## ಅಸಹನೀಯ ಮಾತು

ಝೀ ಕನ್ನಡದ 'ಗಟ್ಟಿ ಮೇಳ' ಮೊದಮೊದಲು ಭರವಸೆ ಹುಟ್ಟಿಸಿತು. ವಾರದಿಂದ ವಾರಕ್ಕೆ ಇದೊಂದು ಅಸಹಜ ಮತ್ತು ಬೇಸರ ಹುಟ್ಟಿಸುವ ಧಾರಾವಾಹಿ ಎಂದೆನಿಸಿತು. ಮುಖ್ಯ ಪಾತ್ರಧಾರಿ ವೇದಾಂತ ಒಂದು ದೊಡ್ಡ ಕಂಪನಿಯ ಮಾಲೀಕ. ಆದರೆ ಆ ಕಂಪನಿಯಲ್ಲಿ ನೌಕರಿ ಮಾಡುವ ಅಮೂಲ್ಯಾ ತನ್ನ ಬಾಸ್‌ಅನ್ನು ಏಕವಚನದಲ್ಲಿ ಸಂಬೋಧಿಸುವುದು ಸರಿ ಕಾಣಿಸುವುದಿಲ್ಲ. ಅಮೂಲ್ಯಾಳ ಭಾಷೆಯನ್ನು ಯಾವ ಬಾಸ್ ಕೂಡ ಸಹಿಸುವುದಿಲ್ಲ.

—ಎಸ್. ರವೀಂದ್ರನಾಥ ಬೆಂಗಳೂರು

## ಕಥೆ ಹೀಗೆ ಮುಂದುವರಿಯಲಿ...

ಝೀ ಕನ್ನಡದಲ್ಲಿ ವಾರಾಂತ್ಯದ ಧಾರಾವಾಹಿ 'ಉಘೇ ಉಘೇ ಮಾದೇಶ್ವರ' ತುಂಬಾ ಚೆನ್ನಾಗಿ ಮೂಡಿಬರುತ್ತಿದೆ. ಅದರಲ್ಲೂ ಇತ್ತೀಚೆಗೆ 'ಸಂಕವ್ವನ ಸಾಲು' ಮನ ಕಲುಕುವಂತಿತ್ತು. ಒಬ್ಬ ಹೆಣ್ಣು ಮದುವೆಯಾದ ನಂತರ ಎಷ್ಟೆಲ್ಲಾ ಕಷ್ಟ ಪಡುತ್ತಾಳೆ. ತನ್ನ ಪತಿ ಎಷ್ಟೇ ಕಷ್ಟ ಕೊಟ್ಟರೂ ಹೇಗೆ ಅವೆಲ್ಲವನ್ನೂ ಎದುರಿಸುತ್ತಾಳೆ. ನಿಜಕ್ಕೂ ಸಂಕವ್ವ ಈ ಕಾಲದ ಹೆಣ್ಣುಮಕ್ಕಳಿಗೆ ಮಾದರಿ. ಇದೇ ರೀತಿ ಕಥೆ ಮುಂದುವರಿಯಲಿ. ಆದರೆ ಜಾಹೀರಾತುಗಳನ್ನು ಕಡಿಮೆ ಮಾಡಿದರೆ ಚೆನ್ನಾಗಿರುತ್ತಿತ್ತು.

—ಅಂಜನ್ ಕುಮಾರ್ ಕೋಲಾರ

## ತೀರಾ ಅಸಂಬದ್ಧ

ಝೀ ಕನ್ನಡದ 'ಪಾರು' ಪಾತ್ರಗಳ ಭಾವನೆ ಅರ್ಥವೇ ಆಗುವುದಿಲ್ಲ. ದೊಡ್ಡ ಕಂಪನಿಯ ಒಡತಿ ಅಖಿಲಾಂಡೇಶ್ವರಿಗೆ ಸ್ವಂತ ವಿವೇಚನೆಯೇ ಇಲ್ಲ. ಬೆಲೆಬಾಳುವ ಸೀರೆ, ಒಡವೆ, ಧರಿಸಿದ ಮಾತ್ರಕ್ಕೆ ಒಂದು ದೊಡ್ಡ ಕಂಪನಿಯ ಒಡತಿ ಆಗಲು ಸಾಧ್ಯವಿಲ್ಲ. ಅದಕ್ಕೆ ತಕ್ಕದಾದ ಬುದ್ಧಿಯೂ ಇರಬೇಕು. ಮನೆಯಲ್ಲಿರುವ ದಾಮಿನಿಯ ವಿಕೃತ ನಡವಳಿಕೆಯನ್ನು ವೀಕ್ಷಕ ನಿಜವಾಗಲೂ ಸಹಿಸಲಾರ. ಎಲ್ಲರನ್ನೂ ದೊಡ್ಡ ಕಣ್ಣುಗಳನ್ನು ಬಿಟ್ಟು ಹದ್ದುಬಸ್ತಿನಲ್ಲಿಟ್ಟಿರುವ ಅಖಿಲಾಂಡೇಶ್ವರಿ ದಾಮಿನಿಯ ಆಟಗಳಿಗೆ ಕಡಿವಾಣ ಹಾಕುವುದೇ ಇಲ್ಲ. ಸ್ವಂತ ಮಕ್ಕಳನ್ನು ಅನುಮಾನದಿಂದ ನೋಡುವ ಅವಳು ಹೊರಗಿನಿಂದ ಬಂದವರನ್ನು ಅತಿಯಾಗಿ ನಂಬುವುದು ಹಾಸ್ಯಸ್ಪದ. ಮನೆಯ ಕೆಲಸದವಳು ಹಾಗೂ ಅಡುಗೆಯವಳು ಒಂದಿಲ್ಲೊಂದು ಕಾರಣಕ್ಕೆ ದೊಡ್ಡ ಮಗನ ಜೊತೆ ಕಾರಿನಲ್ಲಿ, ಹೊರಗಡೆ ತಿರುಗಾಡುವುದು ಅವಳ ಗಮನಕ್ಕೆ ಬರುವುದೇ ಇಲ್ಲ. ಪಾರ್ವತಿಗಾಗಲಿ ಆದಿತ್ಯನಿಗಾಗಲಿ ಪ್ರೀತಿಸಬೇಕು ಅನ್ನುವ ಮನಸ್ಸೇ ಇರುವುದಿಲ್ಲ ಆದರೂ ಪ್ರೇಮಿಗಳಂತೆ ಕಾಣುವುದು ವೀಕ್ಷಕರಿಗೆ ಒಂದು ರೀತಿಯ ಗೊಂದಲ. ಪಾರ್ವತಿಯ ತಮ್ಮ ವಯ್ಯಸಿಗೆ ಮೀರಿ ಮಾತನಾಡುವುದು ಎಷ್ಟು ಸಮಂಜಸ?

—ಎನ್.ಎಸ್. ಚಂದ್ರಶೇಖರ್ ಬೆಂಗಳೂರು

**ವಾರದ ಪತ್ರ**

## ಪಾತ್ರಧಾರಿಗಳ ಅನನ್ಯತೆ

ಕಲರ್ಸ್ ಸೂಪರ್‌ನಲ್ಲಿ 'ಮಗಳು ಜಾನಕಿ'ಯಲ್ಲಿನ ಕಲಾವಿದರು ಅಭಿವ್ಯಕ್ತಿಯಲ್ಲಿ ಅನನ್ಯತೆ ಮೆರೆಯುತ್ತಿದ್ದಾರೆ. ಪಾತ್ರಗಳ ನಿರ್ವಹಣೆಯಲ್ಲಿ 'ನ್ಯಾಯ' ಒದಗಿಸಿಕೊಡುವುದು ಇಲ್ಲಿನ ಪಾತ್ರಧಾರಿಗಳ ವೈಶಿಷ್ಟ್ಯ.

ಜನಜೀವನದ ನಿತ್ಯದ ಆಗುಹೋಗುಗಳಿಗೆ ಅತ್ಯಂತ ಸನಿಹವಾದ ಕಥಾ ಹಂದರ, ಇಂಪಾದ ಸಂಗೀತ, ವಾದ್ಯ ಸಂಗೀತ, ಎಲ್ಲೂ ಸಭ್ಯತೆಯ ಎಲ್ಲೆ ಮೀರದ ಸನ್ನಿವೇಶಗಳು, ಕೋರ್ಟ್‌ನಲ್ಲಿ ನಡೆಯುವ ವಾದ–ಪ್ರತಿವಾದಗಳ ಪರಿಚಯ ಜನಸಾಮಾನ್ಯರಿಗೂ ಆಗಲಿ ಎಂಬ ಕಾಳಜಿ, ಕುಟುಂಬ ಜೀವನದಲ್ಲಿ ಇರಬೇಕಾದ ಪ್ರೀತಿ, ಬಾಂಧವ್ಯಗಳ ಚಿತ್ರಣ ಈ ಧಾರಾವಾಹಿಯನ್ನು ನೋಡುಗರು ಮೆಚ್ಚುವಂತೆ ಮಾಡಿದ್ದು ವಿಶೇಷ.

ಈ ಧಾರಾವಾಹಿಯ ಬಹುತೇಕ ಕಲಾವಿದರು ಬೇರೆ ಬೇರೆ ವಿಷಯಗಳಲ್ಲಿ ಪ್ರತಿಭಾವಂತರು. ಚಂದೂಭಾರ್ಗಿ ಪಾತ್ರಧಾರಿ ಮೈಸೂರು ದಸರಾ ಉತ್ಸವದ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದು, ಮೈತ್ರಿ ಮಹಾನಂದ ಪಾತ್ರಧಾರಿ ಹರ್ಷಿತಾಗೌಡ ಭರತನಾಟ್ಯ ಪ್ರದರ್ಶನ ನೀಡಿದ್ದು, ಜಾನಕಿ ಪಾತ್ರಧಾರಿ ಗಾನವಿ ಉತ್ತಮ ನೃತ್ಯಗಾರ್ತಿ, ಸುಂದರಮೂರ್ತಿ ಪಾತ್ರಧಾರಿ ಶ್ರೀನಾಥ್ ಉತ್ತಮ ವೀಣಾವಾದಕರು, ವರುಣ್‌ವೈಭವ್ ಪಾತ್ರಧಾರಿ ಶ್ರೀಹರ್ಷ ಹೆಗಡೆ ಒಳ್ಳೆಯ ಮಾಡೆಲ್‌ಪಟು... ಹೀಗೆ ನಿಜಜೀವನದಲ್ಲಿ ಒಂದಲ್ಲ ಒಂದು ಕಲೆಯಲ್ಲಿ ನಿಪುಣರಾಗಿದ್ದು ಪಾತ್ರಕ್ಕೆ ಜೀವ ತುಂಬುತ್ತಿದ್ದಾರೆ.

ಸೀರಿಯಲ್‌ನಲ್ಲೂ ಇಂಥವರಿಗೆ ತಮ್ಮ ಪ್ರತಿಭೆ ಅನಾವರಣಕ್ಕೆ ಕಥೆಯ ಮಧ್ಯೆ ಯಾವ ವಿಧದಲ್ಲಾದರೂ ಕೆಲನಿಮಿಷಗಳು ಅವಕಾಶ ಒದಗಿಸಿಕೊಟ್ಟರೆ ಈ ಕಲಾವಿದರು ಮತ್ತೂ ಮನೆಮಾತಾಗಬಹುದು.

—ವಿನಾಯಕ ಹೆಗಡೆ, ಬೆಂಗಳೂರು

## ಹಳಿ ತಪ್ಪದೆ ಸಾಗಲಿ ಸುಜಾತಾ

ಕಲರ್ಸ್ ಕನ್ನಡ ವಾಹಿನಿಯಲ್ಲಿ ಈಚೆಗೆ ಪ್ರಸಾರವಾಗುತ್ತಿರುವ 'ಇವಳು ಸುಜಾತಾ' ಉತ್ತಮ ಕಥಾ ಚಿತ್ರವಾಗುವ ಭರವಸೆ ಹುಟ್ಟಿಸಿದೆ. ನಾಯಕಿಯ ಪಾತ್ರಧಾರಿ, ಅಪರ್ಣಾ ಮತ್ತು ಗಿರಿಜಾ ಲೋಕೇಶ್ ಅವರ ಅಭಿನಯ ಆಕರ್ಷಣೀಯವಾಗಿದೆ. ಎಂದಿನಂತೆ ಮನೆಯಲ್ಲೇ ಖಳನಾಯಕ/ಖಳನಾಯಕಿಯರು ಹುಟ್ಟಿ ಇಷ್ಟೇ ತಾನೇ ಎನಿಸಬಹುದೇ? ಅಪಾಯಕಾರಿ ಬೆಳವಣಿಗೆ ಎಂದರೆ ನಾಯಕಿಯ ಬಾಸ್ ನಡೆಸುತ್ತಿರುವ ಲೈಂಗಿಕ ದೌರ್ಜನ್ಯ. ಈಗ ಅದರ ವಿರುದ್ಧ ಉಗ್ರ ಪ್ರತಿಭಟನೆ ಹಾಗೂ ಕಾನೂನು ಕ್ರಮ ಜರುಗಿಸಬೇಕೆಂಬ ಅರಿವು ಮೂಡಿಸುವ ಸಾಮಾಜಿಕ ಚಳವಳಿ ನಡೆಯುತ್ತಿದೆ. ದುರದೃಷ್ಟವಶಾತ್ ಈ ಸೀರಿಯಲ್ ನಾಯಕಿಯ ಅಶಕ್ತ ಮನೋಭಾವ ಮತ್ತು ಅಪರಾಧದ ವೈಭವೀಕರಣ ಅಪಾಯಕಾರಿ ಸಂದೇಶ ರವಾನಿಸುತ್ತಿದೆ. ಸಂಬಂಧಪಟ್ಟವರು ಇದನ್ನು ಬದಲಾಯಿಸಿಕೊಳ್ಳುವುದು ಅವಶ್ಯವೆನಿಸುತ್ತದೆ.

—ಎಂ.ಜಿ. ಶ್ರೀನಾಥ್ ಮೈಸೂರು

ಸೂಕ್ಷ್ಮತೆ ಬೇಕು: ಇವಳು ಸುಜಾತದಲ್ಲಿ ಪಾರ್ಥ ಕಚೇರಿಯ ಕೆಲಸದಲ್ಲಿ ಇದ್ದಾಗ ಮನೆಯಿಂದ ಅಮ್ಮ ಫೋನ್ ಮಾಡುವುದು, ಆತ ಎಲ್ಲರ ಮುಂದೆ ಅರಿವಿಲ್ಲದೆ ಮಾತನಾಡುವುದು ಎಷ್ಟು ಸರಿ? ಕ್ಷಮಿಸಿ, ಎಂದು ಸಭೆಯಲ್ಲಿ ಕುಳಿತವರಿಗೆ ಹೇಳಿ ಹೊರಬಂದು ಮಾತನಾಡುವುದು ಸೌಜನ್ಯ ಅಲ್ಲವೆ? ಇಂತಹ ಸೂಕ್ಷ್ಮತೆಯನ್ನು ಮರೆಯಬಾರದು.

—ಸೀತಾ ಕೇಶವ, ಸಿಡ್ನಿ

## ಮೂರ್ಖರಿಗಾಗಿ ಸಿದ್ಧಸೂತ್ರಗಳು

ಧಾರಾವಾಹಿಗಳ ಎಲ್ಲ ನಿರ್ದೇಶಕರೂ ಕೆಲವು ಸಿದ್ಧಸೂತ್ರಗಳನ್ನು ಅಳವಡಿಸಿಕೊಂಡಿರುವಂತಿದೆ. ಉದಾಹರಣೆಗೆ ಒಂದು ಧಾರಾವಾಹಿಯಲ್ಲಿ ಕಪಾಳಮೋಕ್ಷ ಮಾಡುವ ದೃಶ್ಯಬಂತು ಅಂತಿಟ್ಟುಕೊಳ್ಳಿ, ಆ ವಾಹಿನಿಯ ಎಲ್ಲ ಧಾರಾವಾಹಿಗಳಲ್ಲೂ ಶೋ ಕೊಟ್ಟಂತೆ ಒಬ್ಬರಿಗೊಬ್ಬರು ಕೆನ್ನೆಗೆ ಬಾರಿಸುತ್ತಾರೆ. ಖಳನಾಯಕಿ ಏನೇ ಮಾಡಿದರೂ ಯಾರ ಗಮನಕ್ಕೂ ಬರಬಾರದು. ಎಷ್ಟೇ ಅನ್ಯಾಯಗಳು ಕಣ್ಣ ಮುಂದೆಯೇ ನಡೆದರೂ ಪೊಲೀಸ್ ನೆಪಮಾತ್ರಕ್ಕೆ ದರ್ಶನ ಕೊಟ್ಟು ಹೋಗಿಬಿಡಬೇಕು. ಡಿಎನ್‌ಎ ಟೆಸ್ಟ್ ಅಂದರೆ ಮಾಮೂಲು ರಕ್ತಪರೀಕ್ಷೆ. ಅದನ್ನು ಯಾರು ಬೇಕಾದರೂ ಲಂಚಕೊಟ್ಟು ಪಡೆಯಬಹುದು. ವರ್ಷಗಟ್ಟಲೆ ಅಭಿನಯಿಸಿದ ಕಲಾವಿದರು ರಜೆ ಕೇಳಿದಾಗ ಅವರನ್ನು ವಿದೇಶ ಯಾತ್ರೆಗೆ ಕಳಿಸಬಹುದು ಅಥವಾ ಅವರ ತಲೆ ಒಡೆದು ಕೋಮಾಕ್ಕೆ ಕಳಿಸಬಹುದು.

ಪ್ರೇಕ್ಷಕರು ಏಕೆ ಹೀಗಾಗುತ್ತೆ ಅಂತ ಯೋಚನೆ ಮಾಡುವ ಬದಲು ನಾಳೆ ಖಳನಾಯಕಿ ಏನು ಪಿತೂರಿ ಮಾಡ್ತಾಳೆ ಎಂದು ಯೋಚಿಸುವಂತೆ ಮಾಡುವುದು ಧಾರಾವಾಹಿಯ ಯಶಸ್ಸು ಎಂದು ತೀರ್ಮಾನಿಸಿದಂತಿದೆ. ಈ ಸಿದ್ಧಸೂತ್ರಗಳಿಂದ ಹೊರಬಂದು ಅಚ್ಚ ಕನ್ನಡ ಕಥೆಯಾಧಾರಿತ ಸುಂದರ ಧಾರಾವಾಹಿಗಳು ಬಂದಾವೆಂದು ಯೋಚಿಸುವುದು ಮೂರ್ಖತನದ ಪರಮಾವಧಿಯಾದೀತು.

—ವಾ.ಮುರಳೀಧರ,ತೀರ್ಥಹಳ್ಳಿ